

ಸಂಕಿರಣ ಮುಗಿದ ಮೇಲೆ ಊಟದ ವಿರಾಮದಲ್ಲಿ ಆ ಹಿರಿಯರು ನನ್ನನ್ನು ಬಿಡಲೇ ಇಲ್ಲ. ಅವರ ಮುಖ್ಯ ಆಕ್ಷೇಪವೆಂದರೆ ಸಾಹಿತಿಗಳೆನ್ನುವವರು ಬೇರೆ ಉಪಗ್ರಹದಿಂದ ಬಂದಿರುವಂತೆ ಮಾತನಾಡುತ್ತಿದ್ದೀರಿ ಎನ್ನುವುದು. ''ಜನರು ನಿಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಿಲ್ಲವೆಂದು ನಿಮ್ಮ ನಿಮ್ಮಲ್ಲೇ ಗೊಣಗುಟ್ಟುತ್ತೀರಿ. ಆ ಗೊಣಗುವಿಕೆಯೂ ಜನರಿಗೆ ಕೇಳಿಸುತ್ತಿಲ್ಲ. ಕವಿಯನ್ನು ನಮ್ಮ ಸಂಸ್ಕೃತಿ ಬಹಳ ದೊಡ್ಡ ಸ್ಥಾನದಲ್ಲಿರಿಸಿದೆ, ಆದರೆ ನೀವು ಲೇಖಕರೆನ್ನುವವರು ಆ ಎತ್ತರಕ್ಕೆ ಅರ್ಹತೆ ಸಂಪಾದಿಸಿಕೊಂಡಿದ್ದೀರಾ? ಸಮಾಜಕ್ಕೆ ನೀವು ಸಲ್ಲಿಸಬೇಕಾದ ಜವಾಬ್ದಾರಿಗಳಿವೆ ಎಂಬುದನ್ನು ನೆನಪಿಟ್ಟಿದ್ದೀರಾ?''

ಅನ್ನ ಸಾರು ಕಲಸಿಕೊಳ್ಳುತ್ತಾ ಎಡಗೈಯಿಂದ ಬೆವರೊರೆಸಿಕೊಳ್ಳುತ್ತಾ ಹಿರಿಯರ ಮಾತನ್ನು ಅಲಕ್ಷ್ಯದಿಂದಲೇ ಕೇಳಿಸಿಕೊಳ್ಳುತ್ತಿದ್ದೆ. ಅಷ್ಟು ವಯಸ್ಸಾದವರನ್ನು ಮರ್ಯಾದೆಯಿಂದ ಕಾಣಬೇಕು ಎಂಬ ಒಂದೇ ಕಾರಣಕ್ಕೆ ಅವರ ಮಾತಿಗೆ ಅನುಕೂಲವಾಗುವಂತೆ ಹಾ, ಹೂ ಎನ್ನುತ್ತಿದ್ದೆ. ಸ್ವಲ್ಪ ಹೊತ್ತಿನ ಮೇಲೆ ಕೀಟಲೆ ಮಾಡೋಣವೆನ್ನಿಸಿತು. "ಒಟ್ಟಿನಲ್ಲಿ ಸಾಹಿತಿಗಳು, ಹೇಗಿರಬೇಕು ಎಂದು ನೀವು ಬಯಸುತ್ತೀರಿ?'' ಎಂದೆ. "ನೋಡಿ, ನಿಮ್ಮಿಂದ ನಾನು ಈ ಪ್ರಶ್ನೆ ಬಯಸಿದ್ದೆ'' ಎಂದು ಹಿರಿಯರು